
# ವಿದ್ಯಾರ್ಥಿಗಳಿಗೆ ಪಂಚಶೀಲ

ಮೂಲ : ಸ್ವಾಮಿ ಭಜನಾನಂದ
ಕನ್ನಡಕ್ಕೆ : ಡಾ.ಸಿ.ಪಿ.ಕೃಷ್ಣಕುಮಾರ್




ಜೀವನದ ದಾರಿಯಲ್ಲಿ ಯಾವ ಕಡೆ ತಿರುಗಬೇಕು, ಏನನ್ನು ಅನುಸರಿಸಬೇಕು, ಯಾರನ್ನು ನಂಬಬೇಕು, ಹೇಗೆ ಮುಂದುವರಿಯಬೇಕು ಎಂಬುದರ ಬಗೆಗೆ ಭಾರತೀಯ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಂದಿಗ್ಧ ಪರಿಸ್ಥಿತಿಯನ್ನು ವಿವರಿಸಿ ಕೆಲವು ಮಾರ್ಗದರ್ಶಿ ಸೂತ್ರ 'ಪಂಚಶೀಲ' ಗಳ ವಿವರಣೆಯನ್ನು ನೀಡಿರುವ ಸ್ವಾಮಿ ಭಜನಾನಂದಜಿ, ಬೇಲೂರು ಮಠದಲ್ಲಿ ರಾಮಕೃಷ್ಣ ಮಿಷನ್ನಿನ ಸಹಾಯಕ ಕಾರ್ಯದರ್ಶಿಗಳಾಗಿದ್ದಾರೆ. ಬೆಂಗಳೂರಿನ ರಾಮಕೃಷ್ಣ ವಿದ್ಯಾರ್ಥಿ ಮಂದಿರದ ಸ್ಮರಣಸಂಚಿಕೆಯಲ್ಲಿ ಪ್ರಕಟವಾಗಿದ್ದ ಆಂಗ್ಲ ಲೇಖನದ ಅನುವಾದ ಮಾಡಿರುವವರು ಕನ್ನಡದ ಖ್ಯಾತ ಸಾಹಿತಿಗಳು ಹಾಗೂ ಅಂಕಣಕಾರರಾದ ಡಾ.ಸಿ.ಪಿ.ಕೆ. ಅವರು.

"ನಾನು ಬದುಕಿರುವತನಕ ಕಲಿಯುತ್ತಿರುತ್ತೇನೆ" ಎನ್ನುತ್ತಿದ್ದರು, ಶ್ರೀರಾಮಕೃಷ್ಣರು. **ಜೀವನ** ಎಂಬ ವಿಶಾಲ, ಸಂಕೀರ್ಣ ಮತ್ತು ನಿಗೂಢ ಪ್ರಕ್ರಿಯೆಯಲ್ಲಿ ನಾವೆಲ್ಲ ನಿರಂತರ ವಿದ್ಯಾರ್ಥಿಗಳು; ಅದರಿಂದ ನಾವು ಕಲಿಯಬಲ್ಲ ಪಾಠಗಳಿಗೆ ಅಂತ್ಯವಾಗಲಿ ಪರಿಮಿತಿಯಾಗಲಿ ಇಲ್ಲ. ಬದುಕೇ ಎಲ್ಲಕ್ಕಿಂತ ದೊಡ್ಡ ಬೋಧಕ. ಈ ಬೋಧಕನನ್ನು ಶ್ರೀರಾಮಕೃಷ್ಣರು ವಿಶ್ವದ ದಿವ್ಯಮಾತೆಯೆಂದು ಕರೆಯುತ್ತಿದ್ದರು. ಈ ಶಾಶ್ವತ ಬೋಧಕನ ವಿದ್ಯಾರ್ಥಿಯಾಗಿ ಬದುಕಿನಿಂದ ತಾನು ಕಲಿತಿರುವುದನ್ನು ತನ್ನ ಸಹವಿದ್ಯಾರ್ಥಿಗಳೊಡನೆ ಹಂಚಿಕೊಳ್ಳುವ ಧ್ಯೇಯದಿಂದ ಈ ಲೇಖನವನ್ನು ಆರಂಭಿಸಲಾಗಿದೆ.

ವಿವಿಧ, ಪರಸ್ಪರ ವಿರುದ್ಧ ಸಾಮಾಜಿಕ ಶಕ್ತಿಗಳ ಅಡ್ಡದಾರಿಯಲ್ಲಿರುವ ಇಂದಿನ ಭಾರತದ ವಿದ್ಯಾರ್ಥಿಗಳಿಗಾಗಿ ಈ ಲೇಖನ ಮುಖ್ಯವಾಗಿ ರಚಿತವಾಗಿದೆ. ನಿರಂತರ ಹೆಚ್ಚುತ್ತಿರುವ ಮತ್ತು ಸತತ ಉನ್ನತೀಕೃತವಾಗುವ ಮಾಹಿತಿ, ಕೌಶಲಗಳ ಹೊರೆಯ ಮೇಲೆ ಹಿಡಿತ ಸಾಧಿಸುವ ದುಷ್ಕರ ಕಾರ್ಯದ ಜೊತೆಗೆ, ಅವರು ಬಹುಸಂಖ್ಯೆಯ ಲಾಭದಾಯಕ ವೃತ್ತಿ, ಉದ್ಯೋಗಗಳನ್ನು ಎಟುಕಿಸಿಕೊಳ್ಳುವ ಮಾರಕ ಸ್ಪರ್ಧೆಯ ಒತ್ತಡದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಮೋಜು, ಮನೋರಂಜನೆಗಳ ಅನೇಕ ದಾರಿಗಳು ಅವರಿಗೆ ತೆರೆದಿರುತ್ತವೆ. ಭಾವನೆಗಳ ಮತ್ತು ಆದರ್ಶಗಳ ದಿಗ್ಭ್ರಾಮಕ ವೈವಿಧ್ಯಕ್ಕೆ ಅವರು ತೆರೆದುಕೊಂಡಿರುತ್ತಾರೆ. ದಾರುಣ ದಾರಿದ್ರ್ಯ ಮತ್ತು ಸಮೃದ್ಧಿ, ಅನಕ್ಷರತೆ ಮತ್ತು ವೈಜ್ಞಾನಿಕ ಉಜ್ವಲತೆ, ಕೊಳೆಗೇರಿಗಳು ಮತ್ತು ಉತ್ತುಂಗ ಭವನಗಳು—ಇಂಥ ಭಾರತೀಯ ಸಮಾಜದಲ್ಲಿನ ಅನೇಕ ವೈರುಧ್ಯಗಳನ್ನು ಅವರು ಎದುರಿಸಬೇಕಾಗುತ್ತದೆ. ಭ್ರಷ್ಟಾಚಾರ, ಅನೈತಿಕತೆ, ಜಾತಿವಾದ, ಲಿಂಗತಾರತಮ್ಯ, ಹೆಂಗಸರು–ಮಕ್ಕಳ ಶೋಷಣೆ ಮುಂತಾದ ಅನೇಕ ಅನಿಷ್ಟಗಳೊಡನೆ ಅವರು ಸೆಣಸಬೇಕಾಗುತ್ತದೆ.

ಯಾವ ಕಡೆ ತಿರುಗಬೇಕು, ಏನನ್ನು ಅನುಸರಿಸಬೇಕು, ಯಾರನ್ನು ನಂಬಬೇಕು, ಹೇಗೆ ಮುಂದುವರಿಯಬೇಕು ಎಂಬುದರ ಬಗೆಗೆ ಭಾರತೀಯ ವಿದ್ಯಾರ್ಥಿಗಳು ಇಂದು ಸಂದಿಗ್ಧದಲ್ಲಿದ್ದಾರೆ. ಈ ತಲ್ಲಣಗೊಳಿಸುವ ಸನ್ನಿವೇಶದಲ್ಲಿ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಪ್ರಬೋಧಕ ಜೀವನ ಮತ್ತು ಉಪದೇಶಗಳು ನಿತ್ಯ ಸ್ಫೂರ್ತಿ, ಮಾರ್ಗದರ್ಶನ ಮತ್ತು ಬೆಂಬಲವನ್ನೊದಗಿಸುತ್ತವೆ. ಈ ಮಹಾಚೇತನಗಳ ಮತ್ತು ಅವರುಗಳನ್ನು ಕುರಿತ ಹೇಳಿಕೆಗಳ ಜ್ಯೋತಿರ್ಮಯ ಸಮುದಾಯದಿಂದ ನಾನು ಐದುತತ್ತ್ವಗಳನ್ನು, 'ಪಂಚಶೀಲ'ಗಳನ್ನು, ಆರಿಸಿದ್ದೇನೆ—ಆಧುನಿಕ ಭಾರತೀಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮಾರ್ಗದರ್ಶಿ ಸೂತ್ರಗಳಾಗಿ ನೆರವಾಗಲೆಂದು. ಅವೆಂದರೆ—**ಧ್ಯೇಯಪರತೆ, ನೈತಿಕ ಸಮಗ್ರತೆ, ಸ್ವಯಂಶಿಸ್ತು, ಸೇವೆ ಮತ್ತು ಶಕ್ತಿ.**

### ೧. ಧ್ಯೇಯಪರತೆ

ಯಾವುದಾದರೊಂದು ಗುರಿಗೆ ಹೊಂದಿಸಿದಾಗ ಮಾತ್ರ ಬದುಕು ಅರ್ಥಪೂರ್ಣವಾಗುತ್ತದೆ. ಸಾಧಿಸುವುದಕ್ಕೊಂದು ನಿಶ್ಚಿತ ಗುರಿಯಿಲ್ಲದಾಗ, ಬದುಕೊಂದು ಅರ್ಥರಹಿತ ಆಚರಣೆಯಾಗಿ, ಕಡೆಯಿಲ್ಲದ ಯಾಂತ್ರಿಕತೆಯಾಗಿ ಪರಿಣಮಿ

ಸುತ್ತದೆ. ನಮ್ಮ ಆಲೋಚನೆಗಳನ್ನೂ ಕ್ರಿಯೆಗಳನ್ನೂ ಒಗ್ಗೂಡಿಸುವ ಒಂದು ಗುರಿಯಿಲ್ಲದಿದ್ದರೆ ಜೀವನ ಛಿದ್ರಛಿದ್ರವೂ ಶಕ್ತಿರಹಿತವೂ ಆಗುತ್ತದೆ.

ಬಹುಮಂದಿಗೆ ಎರಡು ಬಗೆಯ ಗುರಿಗಳು ಬೇಕು: ಒಂದು ಸನಿಹದ ಅಥವಾ ಸದ್ಯದ ಗುರಿ ಮತ್ತು ಒಂದು ಅಂತಿಮ ಗುರಿ. ಎಲ್ಲರಿಗೂ ಹತ್ತಿರದ ಗುರಿಯೆಂದರೆ, ಬದುಕಿನಲ್ಲಿ ಆಯಾ ವ್ಯಕ್ತಿಯ ಸ್ಥಾನಕ್ಕನುಗುಣವಾಗಿ ಜೀವನ ಕರ್ತವ್ಯಗಳನ್ನು ನಿರ್ವಹಿಸುವುದು; ತನ್ಮೂಲಕ, ತಾನೊಂದು ಅಂಗವಾಗಿರುವ ಸಮಾಜದ ಸಮಷ್ಟಿಹಿತಕ್ಕೆ ಅವನು ತನ್ನ ಪಾಲನ್ನು ಸಲ್ಲಿಸಬಹುದು. ವಿದ್ಯಾರ್ಥಿಯ ಪಾಲಿಗೆ ಸದ್ಯದ ಗುರಿಯೆಂದರೆ, ಚೆನ್ನಾಗಿ ಅಧ್ಯಯನ ಮಾಡುವುದರಿಂದ ಅಥವಾ ಕೆಲವು ಔದ್ಯೋಗಿಕ ಕೌಶಲಗಳನ್ನು ಗಳಿಸಿಕೊಳ್ಳುವುದರಿಂದ ಒಂದು ವೃತ್ತಿ ಅಥವಾ ಉದ್ಯೋಗಕ್ಕೆ ಅಣಿಯಾಗುವುದು.

ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನನ್ನು ತಾನು ಕೇಳಿಕೊಳ್ಳಬೇಕು: ಒಂದು ನಿರ್ದಿಷ್ಟ ಉದ್ಯೋಗಕ್ಕೆ ಅಥವಾ ವೃತ್ತಿಗೆ ನಾನು ಹೋಗಬಯಸುವುದು ಏಕೆ? ಒಂದು ವೃತ್ತಿಯನ್ನೋ ಉದ್ಯೋಗವನ್ನೋ ಹುಡುಕುವುದರ ಉದ್ದೇಶ ಕೇವಲ ಹಣ ಸಂಪಾದಿಸುವುದಲ್ಲ; ತನ್ನ ಅಂತಸ್ಥ ಶಕ್ತಿಗಳಿಗೆ ಅಭಿವ್ಯಕ್ತಿ ಕೊಡುವುದು. ಪ್ರತಿಭೆ, ಸಾಮರ್ಥ್ಯಗಳ ರೂಪದಲ್ಲಿ ಕೆಲವು ಶಕ್ತಿಗಳು ಸಹಜವಾಗಿ ಪ್ರತಿಯೊಬ್ಬರಲ್ಲೂ ಇರುತ್ತವೆ. ಕೆಲವರು ಚೆನ್ನಾಗಿ ಹಾಡಬಲ್ಲರು, ಕೆಲವರು ಚೆನ್ನಾಗಿ ಚಿತ್ರ ಬರೆಯಬಲ್ಲರು, ಕೆಲವರು ಭಾಷಣ ಮಾಡಬಲ್ಲರು, ಕೆಲವರಲ್ಲಿ ನಾಯಕತ್ವದ ಗುಣಗಳಿರುತ್ತವೆ, ಕೆಲವರಲ್ಲಿ ಯಂತ್ರೋಪಾಯಗಳ ಅಥವಾ ಶಸ್ತ್ರಚಿಕಿತ್ಸೆಯ ಬಗೆಗೆ ವಿಶೇಷವಾದ ಆಸಕ್ತಿಯಿರುತ್ತದೆ. ಸ್ವಾಮಿ ವಿವೇಕಾನಂದರ ಪ್ರಕಾರ, ಶಿಕ್ಷಣದ ಮುಖ್ಯ ಉದ್ದೇಶವೆಂದರೆ, ಈ ಸಹಜ ಶಕ್ತಿಗಳ ಪ್ರಕಾಶ ಮತ್ತು ವಿಕಾಸ. ಅವರ ಈ ಪ್ರಸಿದ್ಧ ಲಕ್ಷಣೀಕರಣದಲ್ಲಿ ಅವರ ಅಭಿಪ್ರಾಯ ಇದೇ ಆಗಿತ್ತು: "ಮಾನವನಲ್ಲಿ ಈಗಾಗಲೇ ಇರುವ **ಪರಿಪೂರ್ಣತೆಯ** ಹೊಮ್ಮುವಿಕೆಯೇ ಶಿಕ್ಷಣ."

ತನ್ನ ಶಕ್ತಿಗಳನ್ನು ಅತ್ಯುತ್ತಮ ರೀತಿಯಲ್ಲಿ ಅಭಿವ್ಯಕ್ತಿಸಬಲ್ಲ ವ್ಯಕ್ತಿ ಅಥವಾ ಉದ್ಯೋಗದ ಬಗೆಯನ್ನು ವಿದ್ಯಾರ್ಥಿ ಆರಿಸಿಕೊಳ್ಳಬೇಕು. ದುರದೃಷ್ಟವಶಾತ್, ಸರಿಯಾದ ಉದ್ಯೋಗ ಅಥವಾ ವೃತ್ತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ಭಾರತದಲ್ಲಿ ಬಹು ಮಂದಿ ವಿದ್ಯಾರ್ಥಿಗಳಿಗಿರುವುದಿಲ್ಲ. ಅವರ ಉದ್ಯೋಗದ ಆಯ್ಕೆ ಸಾಮಾನ್ಯವಾಗಿ ಅವರ ತಂದೆತಾಯಿಗಳಿಂದ, ಇಲ್ಲವೆ ಸಾಮಾಜಿಕ-ಆರ್ಥಿಕ ಒತ್ತಡಗಳಿಂದ ನಿರ್ಣಯಗೊಳ್ಳುತ್ತದೆ. ಸುಪ್ತ ಪ್ರತಿಭೆ, ಸಾಮರ್ಥ್ಯಗಳಿಗೆ ಅಭಿವ್ಯಕ್ತಿಯನ್ನು ನಿರಾಕರಿಸಿದಾಗ, ವ್ಯಕ್ತಿಗೆ ಬದುಕಿನಲ್ಲಿ ವಿಫಲತೆಯ ಮತ್ತು ಅತೃಪ್ತಿಯ ಭಾವನೆಯುಂಟಾಗುತ್ತದೆ.

ಆದರೂ, **ಹತ್ತಿರದ ಗುರಿ**ಯಿಂದ ಬೇರೆಯಾಗಿ ಪ್ರತಿಯೊಬ್ಬ ವ್ಯಕ್ತಿಗೂ ಬದುಕಿನಲ್ಲಿ ಒಂದು **ಅಂತಿಮ** ಗುರಿಯಿರುತ್ತದೆ. ಐಶ್ವರ್ಯ ಅಥವಾ ಭೋಗ ಎಷ್ಟೇ ಇದ್ದರೂ ಶಾಶ್ವತ ಸಾಫಲ್ಯ ಅಥವಾ ಶಾಂತಿಯನ್ನೀಯಲಾರದು ಎಂಬುದನ್ನು ಪ್ರತಿಯೊಬ್ಬರೂ ಇಂದಲ್ಲ ನಾಳೆ ಕಂಡುಕೊಳ್ಳುತ್ತಾರೆ. ಒಬ್ಬ ವ್ಯಕ್ತಿ ಸರಿಯಾದ ಬಗೆಯ ವೃತ್ತಿಯನ್ನು ಅನುಸರಿಸಲು ಸಮರ್ಥನಾದರೂ, ತನ್ನ ಪ್ರತಿಭೆ ಸಾಮರ್ಥ್ಯಗಳನ್ನು ಸಂಪೂರ್ಣ ಅಭಿವ್ಯಕ್ತಿಸಿ ಪ್ರಸಿದ್ಧಿ ಸಂಪಾದಿಸಲು ಸಮರ್ಥನಾದರೂ, ಅವನು ತನ್ನೊಳಗೆ ಆಳವಾದ ಶೂನ್ಯವೊಂದನ್ನು—ಅದನ್ನವನು ಅಲಕ್ಷಿಸಬಹುದಾದರೂ—ಅನುಭವಿಸುವ ಸಂಭವವುಂಟು. ಆಹಾರ, ಸೌಖ್ಯಗಳು, ಸಂಪತ್ತು, ಕೀರ್ತಿ, ಪ್ರತಿಭೆ, ಸಾಮರ್ಥ್ಯಗಳು—ಇವೆಲ್ಲ ಅನಿತ್ಯವಾದ ದೇಹ ಮನಸ್ಸುಗಳಿಗಷ್ಟೆ ಸಂಬಂಧಿಸಿದವು ಎಂಬ ವಾಸ್ತವಾಂಶದಿಂದ ಈ ಶೂನ್ಯ ಉಂಟಾಗುತ್ತದೆ. ಶರೀರ ಮನಸ್ಸುಗಳಾಚೆಗೆ, ಆತ್ಮವೆನಿಸಿಕೊಂಡ ಆಂತರಿಕ ಜ್ಯೋತಿ ಹೊಳೆಯುತ್ತದೆ. ಈ ಒಳಬೆಳಕು ಅಥವಾ ಆತ್ಮ ಮಾನವ ಜೀವಿಗಳ ನಿಜವಾದ ಸ್ವರೂಪ. ಅದು ಬದಲಾಗದು, ಇಲ್ಲವೆ ಸಾಯದು. ಅದು ಅಮರ. ಅಷ್ಟೇ ಅಲ್ಲ, ಈ ಒಳಬೆಳಕು ಅಥವಾ ಆತ್ಮವು, ಪರಮಾತ್ಮ ಅಥವಾ ಬ್ರಹ್ಮ ಎನಿಸಿಕೊಂಡ ಪರಂಜ್ಯೋತಿಯ ಒಂದು ಅಂಗ. ಇಂಗ್ಲಿಷಿನಲ್ಲಿ ಅದನ್ನು God (ದೇವರು) ಎಂದು ಕರೆಯುತ್ತಾರೆ. ಇದರ ಅರ್ಥವೇನೆಂದರೆ, ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ದಿವ್ಯ ಕೇಂದ್ರವೊಂದಿರುತ್ತದೆ; ಪ್ರತಿಯೊಬ್ಬರ ಹೃದಯದಲ್ಲೂ ಭಗವಂತ ವಾಸಿಸುತ್ತಾನೆ. ಸ್ವಾಮಿ ವಿವೇಕಾನಂದರು ಹೇಳುವಂತೆ, "ಪ್ರತಿಯೊಂದು ಆತ್ಮವೂ ಸಹಜವಾಗಿ ದಿವ್ಯವಾದುದು." ತನ್ನ ನಿಜವಾದ ದೈವೀಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವ ಗಾಢ ಪ್ರೇರಣೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಇರುತ್ತದೆ; ಅದನ್ನವನು ಸಾಕ್ಷಾತ್ಕರಿಸಿಕೊಂಡ ಹೊರತು, ಪರಮ ಸಾಫಲ್ಯವನ್ನೂ ಶಾಂತಿಯನ್ನೂ ಪಡೆಯಲಾರ; ಅವನು ತನ್ನೊಳಗೇ ಒಂದು ಶೂನ್ಯವನ್ನು ಅನುಭವಿಸುತ್ತಾನೆ.

ಪರಮಾತ್ಮನಿಂದ ಬೇರೆಯಲ್ಲದ ತನ್ನ ನಿಜವಾದ ದಿವ್ಯ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಮಾನವನ ಈ ಆಂತರಿಕ ಪ್ರೇರಣೆಯನ್ನೆ ಸ್ವಾಮೀಜಿ ಧರ್ಮವೆಂದು ಕರೆದರು. ಅವರು ಹೇಳುವಂತೆ, "ಮನುಷ್ಯನಲ್ಲಿ ಈಗಾಗಲೇ ಇರುವ **ದಿವ್ಯತೆ**ಯ ಹೊಮ್ಮುವಿಕೆಯೇ ಧರ್ಮ." ಧರ್ಮದ **ಈ ಭಾವನೆ** ವಿದ್ಯಾರ್ಥಿಗಳ ಮನಸ್ಸುಗಳಿಗೆ ಬಾಲ್ಯದಿಂದಲೇ ಬರಬೇಕು. ಅವರ ಹೃದಯಗಳಲ್ಲಿ ದೇವರು ದಿವ್ಯಜ್ಯೋತಿ**ಯಾಗಿ** ವಾಸಮಾಡುತ್ತಾನೆ, ಅವರ ನಿಜವಾದ ಸ್ವರೂಪ

ದಿವ್ಯಜ್ಯೋತಿಯೇ ಹೊರತು ಶರೀರವಾಗಲಿ, ಮನಸ್ಸಾಗಲಿ ಅಲ್ಲ ಎಂಬುದನ್ನು ಮಕ್ಕಳಿಗೆ ಕಲಿಸುವುದು ಸಾಧ್ಯ. ಉಪನಿಷತ್ತುಗಳಲ್ಲಿ ಉಕ್ತವಾದ ನಚಿಕೇತ, ಸತ್ಯಕಾಮ, ಉಪಕೋಸಲ ಮತ್ತಿತರ ಆಧ್ಯಾತ್ಮಿಕ ಬಾಲಕರ ಕಥೆಗಳ ಮೂಲಕ ಈ ಭಾವನೆಯನ್ನು ಮಕ್ಕಳಿಗೆ ತಲುಪಿಸಬಹುದು.

ಅಂತಿಮ ಗುರಿಯೊಂದರ ಭಾವನೆ ವಿದ್ಯಾರ್ಥಿಯ ಮನಸ್ಸನ್ನು ಹೊಕ್ಕಾಗ, ಅದು ಅವನ ಇಡೀ ಬದುಕಿಗೆ ಅರ್ಥ ಮತ್ತು ಉದ್ದೇಶವನ್ನೀಯುತ್ತದೆ ಹಾಗೂ ಬದುಕನ್ನು ಕುರಿತು ವಿಶಾಲ ದೃಷ್ಟಿವ್ಯಾಪ್ತಿ (perspective) ಯೊಂದನ್ನು ಬೆಳೆಸಿಕೊಂಡು ಜಯಾಪಜಯಗಳಿಂದ ನಿರ್ಲಿಪ್ತನಾಗಿ ಉಳಿಯಲು ಅವನಿಗೆ ನೆರವಾಗುತ್ತದೆ. ಕೆಲವರು ವಿದ್ಯಾರ್ಥಿಗಳು ಅಂತಿಮ ಗುರಿಗೆ ಸಹಜವಾಗಿ ಎಚ್ಚರಿರುತ್ತಾರೆ; ಬಹುಮಂದಿ ವಿದ್ಯಾರ್ಥಿಗಳಿಗೆ ಇದರಲ್ಲಿ ಉಪಾಧ್ಯಾಯರ ಅಥವಾ ತಂದೆ ತಾಯಿಗಳ ಸಹಾಯ ಬೇಕಾಗುತ್ತದೆ. ಜೀವನದ ವಿಸ್ಮಯ ಮತ್ತು ನಿಗೂಢತೆಗೆ ಹಾಗೂ ಬದುಕಿನ ಅಂತಿಮ ಗುರಿಗೆ ವಿದ್ಯಾರ್ಥಿ-ಮನಸ್ಸುಗಳನ್ನು ಎಚ್ಚರಗೊಳಿಸುವುದು ನಿಜವಾದ ಉಪಾಧ್ಯಾಯನ ಮೊದಲ ಕರ್ತವ್ಯ.

೨. ನೈತಿಕ ಸಮಗ್ರತೆ

ಮಾನವ ಜೀವಿಗಳನ್ನು ಮೃಗಗಳಿಂದ ಬೇರ್ಪಡಿಸುವುದು ನೈತಿಕತೆ ಎಂದು ಹೇಳುವ ಮಹಾಭಾರತದ ಶ್ಲೋಕವೊಂದಿದೆ. ನೈತಿಕತೆ ಸಂಸ್ಕೃತಿಯ ತಳಹದಿಯನ್ನು ರೂಪಿಸುತ್ತದೆ. ನೈತಿಕ ಚಾರಿತ್ರ್ಯವಿಲ್ಲದ ವ್ಯಕ್ತಿಯನ್ನು ಯಾರೂ ನಂಬುವುದಿಲ್ಲ. ನೈತಿಕ ತತ್ತ್ವಗಳನ್ನು ಉಲ್ಲಂಘಿಸಲು ಸಮಾಜ ಅವಕಾಶವಿತ್ತಾಗ, ಅದರ ಸಂಸ್ಕೃತಿ ನಶಿಸುತ್ತದೆ; ಕುಟುಂಬ ಜೀವನ ಒಡೆದುಹೋಗುತ್ತದೆ; ಅನೀತಿ, ಹಿಂಸೆ, ಅಪರಾಧಗಳು ಹೆಚ್ಚುತ್ತವೆ ಮತ್ತು 'ಏಡ್ಸ್'ನಂಥ ರೋಗಗಳು ಕಾಳ್ಗಿಚ್ಚಿನಂತೆ ಹಬ್ಬುತ್ತವೆ. ಇದು ಪಾಶ್ಚಾತ್ಯ ಸಮಾಜದಲ್ಲಿ ನಮ್ಮ ಕಣ್ಣ ಮುಂದೆಯೇ ನಡೆಯುತ್ತಿದೆ; ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಇದು ಭಾರತೀಯ ಸಮಾಜದಲ್ಲೂ ನಡೆಯುವ ಅಪಾಯವಿದೆ. ಆದ್ದರಿಂದ, ನಮ್ಮ ವಿದ್ಯಾರ್ಥಿಗಳಲ್ಲಿ ಪ್ರಬಲವಾದ ನೈತಿಕ ಸ್ವಭಾವವನ್ನು ಅಚ್ಚೊತ್ತುವುದು ಮುಖ್ಯ.

ವಿದ್ಯಾರ್ಥಿಜೀವನದಲ್ಲಿ ಒತ್ತಿ ಹೇಳಬೇಕಾದ ಒಂದು ಪ್ರಮುಖ ಗುಣವೆಂದರೆ, **ಬ್ರಹ್ಮಚರ್ಯ**. ಅದರ ನೈತಿಕ ಸೂಚನೆಗಳು ಹಾಗಿರಲಿ, ಬ್ರಹ್ಮಚರ್ಯದ ಅಭ್ಯಾಸ ಮಾನಸಿಕ ಶಕ್ತಿಯನ್ನೂ, ಸೂಕ್ಷ್ಮ ಭಾವನೆಗಳನ್ನೂ ಗ್ರಹಿಸುವ ಮತ್ತು ಕಲಿತುದನ್ನು ಉಳಿಸಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಅಮೆರಿಕದಲ್ಲಿ ಕೂಡ ವಿವಾಹಪೂರ್ವ ಬ್ರಹ್ಮಚರ್ಯವನ್ನು ಆಚರಿಸುವ ಹೊಸ ಚಳವಳಿಯೊಂದು ಹಬ್ಬುತ್ತಿದೆ; ಅಧ್ಯಕ್ಷ ಜಾರ್ಜ್ ಬುಷ್ ಅವರ ಸ್ಫೂರ್ತಿಯಿಂದ ಸಾವಿರಾರು ಮಂದಿ ತರುಣ ತರುಣಿಯರು ವಿವಾಹಪೂರ್ವ ಶೀಲ ರಕ್ಷಣೆಯ ವ್ರತವನ್ನು ಕೈಗೊಂಡಿದ್ದಾರೆ.

**ಸತ್ಯಸಂಧತೆ**ಯ ಪ್ರಾಮುಖ್ಯ ಅದಕ್ಕಿಂತ ಕಡಮೆಯದಲ್ಲ. ಸತ್ಯವನ್ನು ಮಾತಿನಲ್ಲಿ ಮಾತ್ರವಲ್ಲ, ನಮ್ಮ ಬದುಕು ಮತ್ತು ಕೆಲಸದಲ್ಲೂ ಪಾಲಿಸಬೇಕು. ಅಪ್ರಾಮಾಣಿಕ ವಿಧಾನಗಳಿಂದ ಹಣ ಸಂಪಾದಿಸುವುದು, ಅಂಕಗಳನ್ನು ಗಳಿಸುವುದು ಮತ್ತು ಪ್ರಸಿದ್ಧಿ ಪಡೆಯುವುದು ಅಪಮಾನಕರ ಮಾತ್ರವಲ್ಲ, ಅಂತಿಮವಾಗಿ ಆತ್ಮನಾಶಕ ಎಂಬುದನ್ನು ನಮ್ಮ ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕು. ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಕಲಿಯುಗದಲ್ಲಿ ಸತ್ಯಪಾಲನೆಯೇ ತಪಸ್ಸು." ಈಗ ಜಗತ್ತಿನ ಅತ್ಯಂತ ಭ್ರಷ್ಟ ರಾಷ್ಟ್ರಗಳಲ್ಲಿ ಆರನೆಯ ಸ್ಥಾನದಲ್ಲಿರುವ ಭಾರತದಲ್ಲಿ ಇದು ಮತ್ತಷ್ಟು ದಿಟ.

ಯುವಜನತೆಗೆ ಒತ್ತಿಹೇಳಬೇಕಾದ ಮೂರನೆಯ ಗುಣವೆಂದರೆ, **ದ್ವೇಷರಾಹಿತ್ಯ**. ದ್ವೇಷ ಮತ್ತು ಅಸೂಯೆ ಬೆಂಕಿಯಿದ್ದಂತೆ; ಅವು ವ್ಯಕ್ತಿತ್ವದ ತಿರುಳನ್ನು ಸುಟ್ಟುಹಾಕಿ ಮನಶ್ಶಾಂತಿಯನ್ನು ಹಾಳುಮಾಡುತ್ತವೆ. ಈ ಬಗೆಗೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಪ್ರತಿಯೊಂದು ಕೆಟ್ಟ ಆಲೋಚನೆಯೂ ಹಿಂಪುಟಿಯುತ್ತದೆ; ನೀವೊಂದು ಗುಹೆಯಲ್ಲಿ ಕೂಡ ಮಾಡಿದ ಪ್ರತಿಯೊಂದು ದ್ವೇಷದ ಆಲೋಚನೆಯೂ ಸಂಗ್ರಹಗೊಂಡು, ಇಲ್ಲಿ ಯಾವುದಾದರೊಂದು ದುಃಖದ ರೂಪದಲ್ಲಿ ಒಂದು ದಿನ ಪ್ರಚಂಡ ಶಕ್ತಿಯೊಡನೆ ನಿಮ್ಮಲ್ಲಿಗೆ ಹಿಂದಿರುಗುತ್ತದೆ... ಇದನ್ನು ನೆನಪಿಡುವುದು, ದುಷ್ಕಾರ್ಯಗಳನ್ನು ಮಾಡದಂತೆ ನಿಮ್ಮನ್ನು ತಡೆಯುತ್ತದೆ." ನಿರ್ದಿಷ್ಟ ವ್ಯಕ್ತಿಗಳ ಬಗೆಗೆ ಮಾತ್ರವಲ್ಲ, ನಿರ್ದಿಷ್ಟ ಗುಂಪುಗಳ ಬಗೆಗೆ ಕೂಡ ದ್ವೇಷವನ್ನು ಬಿಡಬೇಕು. (ನಿಮ್ಮ ಜಾತಿ ಅಥವಾ ಉಚ್ಚ ಜಾತಿಗಳಂತಹ) ಇತರ ಸಾಮಾಜಿಕ ಗುಂಪುಗಳನ್ನು, ಇತರ ಧಾರ್ಮಿಕ ಗುಂಪುಗಳನ್ನು, ಇತರ ಭಾಷಿಕ ಗುಂಪು ಇತ್ಯಾದಿಗಳನ್ನೂ ದ್ವೇಷಿಸದಿರಲು ಅಥವಾ ತಾತ್ಸಾರದಿಂದ ಕಾಣದಿರಲು ನಮ್ಮ ವಿದ್ಯಾರ್ಥಿಗಳಿಗೆ ಕಲಿಸಬೇಕು. ದ್ವೇಷವನ್ನು ತೊರೆದರೆ ಸಾಲದು; ಸರ್ವರ ಬಗೆಗೆ ಪ್ರೀತಿಯ ಇತ್ಯಾತ್ಮಕ ದೃಷ್ಟಿಯನ್ನು ಬೆಳೆಸಿಕೊಳ್ಳುವುದು ಕೂಡ ಅಗತ್ಯ. ಶ್ರೀರಾಮಕೃಷ್ಣರ ಅವತಾರದ ಮುಖ್ಯೋದ್ದೇಶಗಳಲ್ಲಿ ಒಂದು, ಭೂಮಿಯ ಮೇಲೆ ಸಾರ್ವತ್ರಿಕ ಪ್ರೀತಿ, ಸಾಮರಸ್ಯಗಳನ್ನು ಸ್ಥಾಪಿಸುವುದು. ಶ್ರೀರಾಮಕೃಷ್ಣ ಮತ್ತು ಶ್ರೀಮಾತೆಯರ ಜಾಗತಿಕ ಕುಟುಂಬದಲ್ಲಿ, ಎಲ್ಲರೂ ಅಭಿನ್ನ ತಂದೆತಾಯಿಗಳ ಮಕ್ಕಳಂತೆ ಬದುಕುತ್ತಿರುವ ಬ್ರಾಹ್ಮಣ, ಹರಿಜನ, ಹಿಂದೂ, ಬೌದ್ಧ, ಯಹೂದಿ, ಕ್ರೈಸ್ತ ಮತ್ತು ಮುಸ್ಲಿಮರನ್ನೂ; ಪಾಶ್ಚಾತ್ಯರು, ರಷ್ಯನರು, ದಕ್ಷಿಣ ಅಮೆರಿಕನರು ಹಾಗು ವಿವಿಧ ಪ್ರದೇಶಗಳಿಗೆ ಸೇರಿದ ಭಾರತೀಯರನ್ನೂ ಕಾಣಬಹುದು. ಶ್ರೀರಾಮ

ಕೃಷ್ಣ–ಶಾರದಾದೇವಿಯರ ಪ್ರೀತಿ, ಸಾಮರಸ್ಯ ಸಂದೇಶ ವಿದ್ಯಾರ್ಥಿಗಳ ಮನಸ್ಸನ್ನು—ಅವು ಹಟವಾದಿ ಮತೀಯ ಧೋರಣೆಗಳಿಂದ ಅಥವಾ ಸಂಕುಚಿತ ರಾಜಕೀಯ ಪಂಥ ಗಳಿಂದ ನಿರರ್ಥಕವಾಗುವ ಮುನ್ನ—ಪ್ರವೇಶಿಸಬೇಕು.

ನಿಸ್ಸಂದೇಹವಾಗಿ ಇತರ ಹಲವಾರು ಗುಣಗಳಿವೆ. ಆದರೆ ಇಲ್ಲಿ ಹೇಳಿದ ಮೂರು ಮುಖ್ಯ ಗುಣಗಳ ಬೆಳವಣಿಗೆಗೆ ವಿದ್ಯಾರ್ಥಿ ಗಮನವಿತ್ತರೆ, ಪ್ರಬಲ ನೈತಿಕ ಸ್ವಭಾವವನ್ನೂ ಉದಾತ್ತ ವ್ಯಕ್ತಿತ್ವವನ್ನೂ ಬೆಳೆಸಿಕೊಳ್ಳಲು ಅವನು ಸಮರ್ಥ ನಾಗುತ್ತಾನೆ.

೩. **ಸ್ವಯಂಶಿಸ್ತು**

ನೈತಿಕ ಸ್ವಭಾವ ಸ್ವಯಂಶಿಸ್ತಿನಿಂದ ಬೆಂಬಲಗೊಂಡಾಗ ಮಾತ್ರ ವಾಸ್ತವ ಜೀವನದಲ್ಲಿ ಪರಿಣಾಮಕಾರಿಯಾಗುತ್ತದೆ. ಸ್ವಯಂಶಿಸ್ತು ಎಂದರೆ, ಇತರರು ಶಿಸ್ತು ವಿಧಿಸಲು ಅವಕಾಶ ವೀಯುವುದರ ಬದಲು ಸ್ವಂತ ಸಂಕಲ್ಪಶಕ್ತಿಯಿಂದ ತಾವೇ ವಿಧಿಸಿಕೊಳ್ಳುವ ಶಿಸ್ತು. ಈ ಭಯಂಕರ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಯೊಬ್ಬ ಯಶಸ್ವಿಯಾಗಬಯಸಿದರೆ ಅವನು ಒಂದು ಬಗೆಯ ತಪಸ್ಸನ್ನು ತನ್ನ ಮೇಲೆಯೆ ವಿಧಿಸಿಕೊಂಡು, ನಿರ್ದಿಷ್ಟ ನಿಯಮಗಳಿಗನುಸಾರವಾಗಿ ಬದುಕಬೇಕು. ಜೀವನದಲ್ಲಿ, ಅದರಲ್ಲೂ ವಿದ್ಯಾರ್ಥಿ ಜೀವನದಲ್ಲಿ ಸೋಲಿನ ಮುಖ್ಯ ಕಾರಣಗಳಲ್ಲಿ ಒಂದೆಂದರೆ, ಸಮರ್ಪಕ ಸ್ವಯಂಶಿಸ್ತಿನ ಅಭಾವ. ಕೇವಲ ತಮ್ಮ ಶಿಸ್ತುರಹಿತ ಜೀವನವಿಧಾನದಿಂದಾಗಿ ಮೇಲ್ದರ್ಜೆ ಗಳಿಸದ ಎಷ್ಟೋ ಮಂದಿ ಪ್ರತಿಭಾಶಾಲಿ ವಿದ್ಯಾರ್ಥಿಗಳಿದ್ದಾರೆ.

ಸ್ವಯಂಶಿಸ್ತು ಮೂರು ಬಗೆಯದು: ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ. **ದೈಹಿಕ ಶಿಸ್ತಿನಲ್ಲಿ** ಇವು ಸೇರುತ್ತವೆ: ಒಂದು ನಿಶ್ಚಿತ ದೈನಂದಿನ ಜೀವನಕ್ರಮಕ್ಕೆ ಅಂಟಿಕೊಳ್ಳುವುದು. ಆಹಾರ, ನಿದ್ರೆ ಮತ್ತು ಮನೋರಂಜನೆಗಳಲ್ಲಿ ನಿಯಮ ಪಾಲನೆ. ಯಾವುದಾದರೂ ನಿಶ್ಚಿತ ಕಾರ್ಯದಲ್ಲಿ ತೊಡಗುವುದು ಮತ್ತು ಶಾಲೆ ಅಥವಾ ಕಾಲೇಜಿನಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಶಿಸ್ತುಬದ್ಧ ರೀತಿಯಲ್ಲಿ ವರ್ತಿಸುವುದು.

ವಿದ್ಯಾರ್ಥಿಗೆ ಹೆಚ್ಚು ಮುಖ್ಯವಾದುದು **ಮಾನಸಿಕ ಶಿಸ್ತು.** ಮಾನಸಿಕ ಶಿಸ್ತು ಈ ಕ್ರಮಗಳನ್ನೊಳಗೊಳ್ಳುತ್ತದೆ:

(ಅ) ಮಾನಸಿಕ ಶಿಸ್ತಿನಲ್ಲಿ ಮೊದಲ ಹೆಜ್ಜೆ, ಮಾನಸಿಕ ಶಕ್ತಿಯನ್ನು ಚಂಚಲಗೊಳಿಸಿ, ಕರಗಿಸಿಬಿಡುವ ಎಲ್ಲ ಚಟುವಟಿಕೆಗಳನ್ನು ವರ್ಜಿಸುವುದು. ಪತ್ರಿಕೆಗಳನ್ನೋದುವುದು, ಆಳವಿಲ್ಲದ ನಿಯತಕಾಲಿಕೆಗಳ ಲೇಖನಗಳನ್ನೋದುವುದು, ಆಕಾಶವಾಣಿಯ ಅಗ್ಗದ ಸಂಗೀತಕ್ಕೆ ಕಿವಿಗೊಡುವುದು, ಕೆಲಸಕ್ಕೆ ಬಾರದ ದೂರದರ್ಶನ ಕಾರ್ಯಕ್ರಮಗಳ ವೀಕ್ಷಣೆ, ಅಪರಾಧ ಸಂಬಂಧವಾದ ಕತೆ ಕಾದಂಬರಿಗಳನ್ನೋದುವುದು, 'ಅಂತರ್ಜಾಲ' (Internet) ವಿಹಾರ—ಇವೆಲ್ಲ, ನಿರ್ದಿಷ್ಟ ಮಿತಿಯನ್ನು ಮೀರಿ ನಡೆದರೆ, ಕಾಲದ ದುರ್ವ್ಯಯಕ್ಕೆ ಮಾತ್ರವಲ್ಲ, ಮಾನಸಿಕ ಶಕ್ತಿಯ ನಿರರ್ಥಕತೆಗೂ ಕಾರಣವಾಗುತ್ತವೆ; ಹಾಗೆಯೆ, ಅತಿಯಾದ ಚಿಂತೆ, ನಿರಾಸಕ್ತಿ, ಮತ್ತು ಹಗಲುಗನಸು ಕಾಣುವಿಕೆ ಇವುಗಳಿಂದ ಮನಸ್ಸು ತೊಳಲುವುದಕ್ಕೆ ಆಸ್ಪದವೀಯದೆ, ನಿರ್ದಿಷ್ಟ ವಿಷಯದ ಮೇಲೆ ಕೇಂದ್ರೀಕೃತವಾಗಲು ಅದನ್ನು ಒತ್ತಾಯಿಸಬೇಕು—ಅದು ಬೇಸರಗೊಳಿಸುವ ಅಥವಾ ಕ್ಲಿಷ್ಟವಾದ ವಿಷಯವಾದರೂ ಸರಿಯೆ.

(ಆ) ಅನ್ಯಮನಸ್ಕತೆಗೆ ಎಡೆಗೊಡುವ ಅಭ್ಯಾಸಗಳನ್ನು ಬಿಡುವುದು ಮಾತ್ರವಲ್ಲದೆ, ಮನಸ್ಸಿಗೆ ಕ್ರಮಬದ್ಧ, ತಾರ್ಕಿಕ ಆಲೋಚನೆಯಲ್ಲಿ ತೊಡಗುವಂತೆ ಸಮರ್ಪಕ ತರಬೇತಿ ಕೊಡಬೇಕು. ತಾನು ಗಳಿಸಿದ ಜ್ಞಾನವನ್ನು ವರ್ಗೀಕರಿಸುವುದು ಹೇಗೆ, ಎಲ್ಲ ವಿಭಿನ್ನ ಭಾವನೆಗಳನ್ನೂ ಒಂದು ಅರ್ಥಪೂರ್ಣ ವಿನ್ಯಾಸವಾಗಿ ಕೂಡಿಸುವುದು ಹೇಗೆ, ಕೇಂದ್ರವಸ್ತುವಿಗೆ ಅದನ್ನು ಸಂಬಂಧಿಸುವುದು ಹೇಗೆ ಎಂಬುದನ್ನು ವಿದ್ಯಾರ್ಥಿ ಕಲಿಯಬೇಕು. ತನ್ನ ಪಠ್ಯಪುಸ್ತಕಗಳನ್ನು ವ್ಯಾಸಂಗ ಮಾಡುವುದು ಹೇಗೆ, ತನ್ನ ಸ್ವಂತ ಟಿಪ್ಪಣಿಗಳನ್ನು ತಯಾರು ಮಾಡುವುದು ಹೇಗೆ, ಪರೀಕ್ಷೆಗಳಿಗೆ ಸಿದ್ಧವಾಗುವುದು ಹೇಗೆ ಎಂಬುದನ್ನು ಕಲಿಯಬೇಕು. ಅನೇಕ ಭಾರತೀಯ ವಿದ್ಯಾರ್ಥಿಗಳು ಈ ಎಲ್ಲಕ್ಕೂ ತರಬೇತಿ, ಬೋಧನೆಗಳನ್ನು ಅವಲಂಬಿಸುತ್ತಾರೆ.

(ಇ) ಮಾನಸಿಕ ಶಿಸ್ತಿನ ಮೂರನೆಯ ಘಟ್ಟವೆಂದರೆ, ಏಕಾಗ್ರತೆಯ ಬಗೆಗೆ ಮನಸ್ಸಿಗೆ ತರಬೇತಿ ಕೊಡುವುದು. ಮನಸ್ಸಿನ ಏಕಾಗ್ರತೆಯನ್ನು ಅಭ್ಯಸಿಸುವ ಹಲವಾರು ವಿಧಗಳಿವೆ. ವಿದ್ಯಾರ್ಥಿ ತನ್ನ ಮನೋಧರ್ಮಕ್ಕನುಗುಣವಾಗಿ ಅವುಗಳಲ್ಲಿ ಯಾವುದಾದರೊಂದು ವಿಧಾನವನ್ನು ಅನುಸರಿಸಬಹುದು. ಶಿಕ್ಷಣದಲ್ಲಿ ಮನಸ್ಸಿನ ಏಕಾಗ್ರತೆಯ ಪ್ರಾಮುಖ್ಯದ ಬಗೆಗೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನನ್ನ ಪಾಲಿಗೆ ಶಿಕ್ಷಣದ ಸಾರವೆಂದರೆ, ಮನಸ್ಸಿನ ಏಕಾಗ್ರತೆ; ಮಾಹಿತಿಸಂಗ್ರಹವಲ್ಲ. ನಾನು ನನ್ನ ವಿದ್ಯಾಭ್ಯಾಸವನ್ನು ಮತ್ತೆ ಮಾಡುವುದಾದರೆ, ಆ ವಿಷಯದ ಬಗೆಗೆ ನನ್ನ ಅಭಿಪ್ರಾಯಕ್ಕೆ ಅವಕಾಶವಿದ್ದರೆ, ನಾನು ಮಾಹಿತಿಗಳನ್ನು ಅಭ್ಯಸಿಸುವುದೇ ಇಲ್ಲ. ಏಕಾಗ್ರತೆ ಮತ್ತು ನಿರ್ಲಿಪ್ತತೆಯ ಶಕ್ತಿಯನ್ನು ನಾನು ಬೆಳೆಸಿಕೊಳ್ಳುತ್ತೇನೆ; ಅನಂತರ ಪರಿಪೂರ್ಣ ಉಪಕರಣಸಹಿತ ಮಾಹಿತಿಗಳನ್ನು ಮನಬಂದಾಗ ಸಂಗ್ರಹಿಸುವುದು ಸಾಧ್ಯ."

ಸ್ವಯಂಶಿಸ್ತನ್ನು ಅಭ್ಯಾಸ ಮಾಡುವ ವಿದ್ಯಾರ್ಥಿ ಆಂತರಿಕ ಸ್ವಾತಂತ್ರ್ಯ ಹಾಗೂ ಆಂತರಿಕ ಶಕ್ತಿಯ ಲಾಭ ಪಡೆಯುತ್ತಾನೆ; ಅದು, ಜವಾಬ್ದಾರಿಗಳನ್ನು ವಹಿಸಿಕೊಳ್ಳಲು

ಮತ್ತು ತಾನು ಪ್ರವೇಶಿಸುವ ಯಾವುದೇ ಕಾರ್ಯಕ್ಷೇತ್ರದಲ್ಲಿ ಯಶಸ್ಸು ಗಳಿಸಲು ಅವನನ್ನು ಸಮರ್ಥನನ್ನಾಗಿಸುತ್ತದೆ.

ಆಲಸ್ಯದ, ಅನಿಯತವಾದ, ಸುಖಲೋಲುಪತೆಯ ಬದುಕು ನಡೆಸುವ ವಿದ್ಯಾರ್ಥಿಗಳು ದುಶ್ಚಟಗಳ ದಾಸರಾಗಿ, ತಮಗೂ ಇತರರಿಗೂ ಸಮಸ್ಯೆಗಳನ್ನು ಸೃಷ್ಟಿಸುತ್ತಾರಷ್ಟೆ. ಅವರು ಯಾವಾಗಲೂ ತಮ್ಮನ್ನು ತಾವು ಮೆಚ್ಚಿಸುವುದಕ್ಕೆ ಪ್ರಯತ್ನಿಸುತ್ತಾರೆ, ಕೊನೆಗೆ ಯಾರನ್ನೂ ಮೆಚ್ಚಿಸುವುದಿಲ್ಲ.

೨. ಸೇವೆ

ಆಧುನಿಕ ಸಾಮಾಜಿಕ ಆಲೋಚನೆಗೆ ಸ್ವಾಮಿ ವಿವೇಕಾನಂದರ ಅನೇಕ ದೊಡ್ಡ ಕೊಡುಗೆಗಳಲ್ಲಿ ಎರಡು ವಿಶೇಷ ಉಲ್ಲೇಖಕ್ಕೆ ಅರ್ಹವಾಗಿವೆ. ಅವೆಂದರೆ: (ಅ) ಬದುಕಿನ ಒಂದು ವಿಧಾನವಾಗಿ ಸೇವೆ; (ಆ) ಸೇವೆಯ ದೈವೀಕರಣ.

ಬಹಳ ಜನ ತಮ್ಮ ಸ್ವಂತ ಹಿತದಲ್ಲಿ ಮತ್ತು ತಮ್ಮ ಕುಟುಂಬಗಳ ಹಿತದಲ್ಲಿ ಮಾತ್ರ ಆಸಕ್ತರಾಗಿರುತ್ತಾರೆ ಎಂಬುದು ಸಾಮಾನ್ಯವಾಗಿ ಕಂಡುಬರುತ್ತದೆ. ಎಲ್ಲೋ ಕೆಲವರು ಮಾತ್ರ ಸಾಮಾಜಿಕ ಸೇವೆಯಲ್ಲಿ ಮಗ್ನರಾಗಿರುವುದನ್ನು ಕಾಣುತ್ತೇವೆ. ಆದರೆ ಸಾಮಾಜಿಕ ಸೇವೆ ಎಂಬುದು ವಿಶೇಷ ಜನವರ್ಗಕ್ಕೆ ಉದ್ದಿಷ್ಟವಾದ ವಿಶೇಷ ಚಟುವಟಿಕೆಯ ಬಗೆಯಲ್ಲ, ಎಲ್ಲರಿಗೂ ಉದ್ದಿಷ್ಟವಾದ ಸಹಜ ಜೀವನ ಮಾರ್ಗ ಎಂಬುದು ಸ್ವಾಮಿ ವಿವೇಕಾನಂದರ ಅಭಿಮತವಾಗಿತ್ತು. ಏಕೆಂದರೆ, ಮಾನವ ಸಮಾಜ ಅಂತರ್ ಸಂಬಂಧಗಳ ಒಂದು ಸಂಕೀರ್ಣ ಜಾಲ. ಪ್ರತಿಯೊಬ್ಬ ವ್ಯಕ್ತಿಯ ಬದುಕೂ ಇತರ ಅನೇಕರ ದುಡಿಮೆಯನ್ನು, ಅದರಲ್ಲೂ ಪ್ರತಿಯೊಂದು ದೇಶದ ಶ್ರಮಶಕ್ತಿಯನ್ನು ರೂಪಿಸುವ ಬಡಜನ ಸಮುದಾಯದ ದುಡಿಮೆಯನ್ನು, ಅವಲಂಬಿಸಿರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಸಮಾಜದ ಇತರ ಸದಸ್ಯರಿಗೆ, ಅದರಲ್ಲೂ ಬಡವರಿಗೆ, ಋಣಿಗಳು. ಆದಕಾರಣ ಸ್ವಾಮೀಜಿ ಘೋಷಿಸಿದರು: 'ಲಕ್ಷಾಂತರ ಮಂದಿ ಹಸಿವು, ಅಜ್ಞಾನಗಳಲ್ಲಿರುವ ತನಕ, ಪ್ರತಿಯೊಬ್ಬನನ್ನೂ ನಾನು ದ್ರೋಹಿಯೆಂದು ಪರಿಗಣಿಸುತ್ತೇನೆ; ಅವನು ಅವರ ಖರ್ಚಿನಲ್ಲಿ ಶಿಕ್ಷಣ ಪಡೆದು ಅವರಿಗೆ ಕನಿಷ್ಠ ಲಕ್ಷ್ಯವನ್ನೂ ಕೊಡುವುದಿಲ್ಲ.'

ವಿದ್ಯಾರ್ಥಿಗಳೂ ಸಮಾಜದ ಒಂದು ಅವಿಭಾಜ್ಯ ಅಂಗವಾಗಿದ್ದಾರೆ. ಸಮಾಜದ ಇತರ ಸದಸ್ಯರ ಕೊಡುಗೆಯಿಂದ ಮಾತ್ರ ಪ್ರತಿಯೊಬ್ಬ ವಿದ್ಯಾರ್ಥಿಯ ನಿರ್ವಹಣೆ ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳಿಗೂ ಸಮಾಜದ ಕುರಿತಂತೆ ಒಂದು ಕರ್ತವ್ಯವಿದೆ. ಅನೇಕ ವಿದ್ಯಾರ್ಥಿಗಳು ಸ್ವಾರ್ಥಪರ ಮೋಜುಗಳಲ್ಲಿ ಅಥವಾ ನಿಷ್ಕ್ರಿಯೆಯಲ್ಲಿ ಬೇಕಾದಷ್ಟು ಕಾಲ ಕಳೆಯುತ್ತಾರೆ. ಈ ಕಾಲದ ಕಡೆಯಪಕ್ಷ ಒಂದು ಭಾಗವನ್ನು ಸ್ಥಳೀಯ ಬಡಜನತೆಗೆ ಅಥವಾ ಸೇವಾಸಂಸ್ಥೆಗಳಿಗೆ ಸೇವೆ ಸಲ್ಲಿಸುವುದಕ್ಕೆ ಅವರು ಉಪಯೋಗಿಸಿಕೊಳ್ಳಬಹುದು.

ಸ್ವಾಮೀಜಿ ಪ್ರತಿಪಾದಿಸಿದ ಮತ್ತೊಂದು ಅಂಶವೆಂದರೆ, ಬಡವರ ಮತ್ತು ರೋಗಿಗಳ ಸೇವೆಯನ್ನು ಅಹಂಕಾರಯುಕ್ತ ಅನುಕಂಪೆಯಿಂದ ಕೈಗೊಳ್ಳದೆ ವಿನೀತ ಪೂಜೆಯಾಗಿ ಕೈಗೊಳ್ಳಬೇಕೆನ್ನುವುದು. ದೇವರು ಎಲ್ಲರ ಹೃದಯಗಳಲ್ಲಿ ವಾಸಮಾಡುತ್ತಾನೆ; ಮಾನವಸೇವೆಯೆಂದರೆ, ನಿಜವಾಗಿ ಮಾನವರೂಪದಲ್ಲಿರುವ ದೇವರ ಸೇವೆ. ಸ್ವಾಮೀಜಿ ಹೇಳಿದರು: "ಬಡವರಲ್ಲಿ, ದುರ್ಬಲರಲ್ಲಿ, ರೋಗಿಗಳಲ್ಲಿ ಶಿವನನ್ನು, ಕಾಣುವವನು ದಿಟವಾಗಿ ಶಿವನನ್ನು ಪೂಜಿಸುತ್ತಾನೆ; ವಿಗ್ರಹದಲ್ಲಿ ಮಾತ್ರ ಅವನು ದೇವರನ್ನು ದರ್ಶಿಸಿದರೆ, ಅಂಥ ಪೂಜೆ ಇನ್ನೂ ಮೊದಲ ಹಂತದಲ್ಲೇ ಇದೆ."

೩. ಶಕ್ತಿ

ಬದುಕು, ಪ್ರತಿಯೊಬ್ಬ ವ್ಯಕ್ತಿಯ ಬದುಕು, ಸಮಸ್ಯೆ, ಸಂಕಷ್ಟ, ಅನಿಶ್ಚಿತತೆಗಳಿಂದ ತುಂಬಿಹೋಗಿದೆ. ಅವುಗಳನ್ನು ಎದುರಿಸಲು ಪ್ರತಿಯೊಬ್ಬರಿಗೂ ಬೇಕಾದ ಒಂದು ಗುಣವೆಂದರೆ, ಶಕ್ತಿ—ದೈಹಿಕ ಶಕ್ತಿ, ಮಾನಸಿಕ ಶಕ್ತಿ ಮತ್ತು ಆಧ್ಯಾತ್ಮಿಕ ಶಕ್ತಿ. ಇದು ವಿದ್ಯಾರ್ಥಿಗಳ ಬಗೆಗೂ ದಿಟ. ಸ್ವಾಮಿ ವಿವೇಕಾನಂದರ ಸಂದೇಶದಲ್ಲಿ ಶಕ್ತಿಯ ಭಾವನೆ ಕೇಂದ್ರಸ್ಥಾನವನ್ನು ವಹಿಸುತ್ತದೆ. ಸ್ವಾಮೀಜಿಯ ಶಕ್ತಿಸಂದೇಶಕ್ಕೆ ಎರಡು ವಿಶಿಷ್ಟ ಲಕ್ಷಣಗಳಿವೆ.

(ಅ) ಮೊದಲನೆಯದಾಗಿ, ಎಲ್ಲ ಸ್ವಭಾವದೋಷಗಳಿಗೆ, ಜಗತ್ತಿನ ಎಲ್ಲ ಅನಿಷ್ಟಗಳಿಗೆ ಆಂತರಿಕ ಶಕ್ತಿಯ ಅಭಾವವೇ ಕಾರಣವೆಂಬುದನ್ನು ಸ್ವಾಮೀಜಿ ತೋರಿಸಿಕೊಟ್ಟರು. ಅವರು ಹೇಳಿದರು: "ಎಲ್ಲ ಪಾಪಗಳನ್ನೂ, ಕೆಡುಕುಗಳನ್ನೂ ಒಂದು ಶಬ್ದದಲ್ಲಿ ಸಂಗ್ರಹಿಸುವುದು ಸಾಧ್ಯ: ದೌರ್ಬಲ್ಯ. ಎಲ್ಲ ಕೆಟ್ಟ ಕೆಲಸಗಳ ಪ್ರೇರಕಶಕ್ತಿ, ದೌರ್ಬಲ್ಯ. ಜನ ಇತರರನ್ನು ನೋಯಿಸುವಂತೆ ಮಾಡತಕ್ಕದ್ದು ದೌರ್ಬಲ್ಯ..." ಎಂದರೆ, ಸ್ವಭಾವದೋಷಗಳನ್ನು ಗೆಲ್ಲಲು, ನೈತಿಕ ಜೀವನವನ್ನು ನಡೆಸಲು ಬಹುಮಂದಿಗೆ ಬೇಕಾದುದು ಕೇವಲ ಉಪದೇಶ ಮತ್ತು ಪ್ರವಚನವಲ್ಲ, ಆಂತರಿಕ ಶಕ್ತಿಗೆ ಪ್ರವೇಶ ಪಡೆಯುವುದು. ಆಂತರಿಕ ಶಕ್ತಿಯ ಸಂಪಾದನೆ ಹೇಗೆ? ಶಕ್ತಿಯ ಆಕರ ಎಲ್ಲಿದೆ? ಈ ಪ್ರಶ್ನೆ ಸ್ವಾಮೀಜಿಯ ಶಕ್ತಿ ಸಂದೇಶದ ಎರಡನೆಯ ಅನನ್ಯ ಮುಖಕ್ಕೆ ಕರೆದೊಯ್ಯುತ್ತದೆ.

(ಆ) ಸ್ವಾಮೀಜಿಯ ಪ್ರಕಾರ, "ಎಲ್ಲ ಶಕ್ತಿಯೂ ನಿಮ್ಮೊಳಗಿದೆ. ಅದರಲ್ಲಿ ನಂಬಿಕೆಯನ್ನಿಡಿ; ನೀವು ದುರ್ಬಲರೆಂದು ಭಾವಿಸಬೇಡಿ... ಎದ್ದು ನಿಂತು ನಿಮ್ಮೊಳಗಿರುವ ದೈವಿಕತೆಯನ್ನು ಅಭಿವ್ಯಕ್ತಿಸಿ." ಉಪನಿಷತ್ತುಗಳು ಘೋಷಿಸುತ್ತವೆ: **ಆತ್ಮನಾ ವಿಂದತೇ ವೀರ್ಯಂ** (ಆತ್ಮನ ಮೂಲಕ ಶಕ್ತಿಯನ್ನು ಗಳಿಸಲಾಗುತ್ತದೆ). ಆದರೆ ಸ್ವಾಮಿ ವಿವೇಕಾ

ನಂದರು ಹೇಳುವ ತನಕ ಈ ಉದಾತ್ತ ಭಾವನೆಯನ್ನು ಭಾರತದಲ್ಲಿ ಯುಗಯುಗಗಳವರೆಗೆ ಎಂದೂ ಸಮರ್ಪಕವಾಗಿ ಅರ್ಥಮಾಡಿಕೊಳ್ಳಲಿಲ್ಲ, ಬದುಕಿಗೆ ಅನ್ವಯಿಸಲಿಲ್ಲ. ಸಾಂಪ್ರದಾಯಿಕ ದೃಷ್ಟಿಯಲ್ಲಿ ಆತ್ಮನನ್ನು ಕೇವಲ ನಿರ್ಗುಣ, ತಟಸ್ಥ ಎಂದು ಗಣಿಸಲಾಗುತ್ತದೆ; ಅದು ಪರಿವರ್ತನರಹಿತ ಸಾಕ್ಷಿಯಲ್ಲದೆ ಮತ್ತೇನಲ್ಲ. ಸ್ವಾಮೀಜಿಯ ಪಾಲಿಗೆ ಆತ್ಮ ಎಲ್ಲ ಶಕ್ತಿ, ಮಹಿಮೆಗಳ ಆಕರ. ಎಂದರೆ, ಪ್ರತಿಯೊಂದು ವ್ಯಕ್ತಿಯ ಹೃದಯಮಧ್ಯದಲ್ಲಿ ಅನಂತಶಕ್ತಿಯ ಆಕರವಿರುತ್ತದೆ. ಸಾಮಾನ್ಯವಾಗಿ ಇದರ ಅರಿವು ಜನರಿಗಿರುವುದಿಲ್ಲ. ಅದರ ಅರಿವು ಅವರಿಗೆ ಉಂಟಾದರೆ, ಅವರು ಅದನ್ನು ಜಾಗೃತಿಗೊಳಿಸಿಕೊಳ್ಳಬಲ್ಲವರಾದರೆ, ಅವರು ಅನಂತ ಶಕ್ತಿಯನ್ನು ಎಟುಕಿಸಿಕೊಳ್ಳುತ್ತಾರೆ. ಸ್ವಾಮೀಜಿ ಈ ಭಾವನೆಯನ್ನು ತಮ್ಮ ಮದ್ರಾಸ್ ಉಪನ್ಯಾಸವೊಂದರಲ್ಲಿ ಹೀಗೆ ವ್ಯಕ್ತಪಡಿಸಿದರು: "ಪ್ರತಿಯೊಬ್ಬರಿಗೂ ಅವರ ನೈಜ ಸ್ವರೂಪವನ್ನು ಬೋಧಿಸಿ; ನಿಮಗೂ ಬೋಧಿಸಿಕೊಳ್ಳಿ. ಮಲಗಿರುವ ಆತ್ಮವನ್ನು ಕೂಗಿ ಎಬ್ಬಿಸಿ; ಅದು ಹೇಗೆ ಎಚ್ಚರಗೊಳ್ಳುವುದೆಂಬುದನ್ನು ನೋಡಿ. ಈ ಸುಪ್ತ ಆತ್ಮವನ್ನು ಸ್ವಪ್ರಜ್ಞಾತ್ಮಕ ಚಟುವಟಿಕೆಗೆ ಎಚ್ಚರಿಸಿದಾಗ, ಶಕ್ತಿ ಬರುತ್ತದೆ, ಕೀರ್ತಿ ಬರುತ್ತದೆ, ಒಳ್ಳೆಯತನ ಬರುತ್ತದೆ, ಶುದ್ಧಿ ಬರುತ್ತದೆ, ಉತ್ತಮವಾದುದೆಲ್ಲ ಬರುತ್ತದೆ." ನಿಜವಾಗಿಯೂ ಇದೊಂದು ಅದ್ಭುತವಾದ ಭಾವನೆ.

ಆದರೂ, ಈ ವೇದಾಂತ ಬೋಧನೆಯನ್ನು ಅನುಸರಿಸಲಾರದವರಿಗೆ ಶ್ರೀರಾಮಕೃಷ್ಣರು ಮತ್ತು ಶ್ರೀಶಾರದಾದೇವಿಯವರು ಬೇರೊಂದು ಪಥವನ್ನು ತೋರಿಸಿದ್ದಾರೆ: ಅದು ಪ್ರಾರ್ಥನೆಯ ಮತ್ತು ಭಗವಂತನಲ್ಲಿ ವೈಯಕ್ತಿಕ ಶರಣಾಗತಿಯ ಪಥ. ವಿವಿಧ ಮತಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಪರಿಚಿತನಾಗಿರುವ ಪರಮಪುರುಷನೊಬ್ಬನಿದ್ದಾನೆ; ಅವನು ಪರಮಶಕ್ತಿಯ, ಪರಮಪ್ರೇಮ ಆನಂದಗಳ ಆಕರ; ಜನರನ್ನು ರಕ್ಷಿಸಿ ಮುನ್ನಡೆಸುವವನು. ಪ್ರಾರ್ಥಿಸುವುದರಿಂದ ಮತ್ತು ಅವನಿಗೆ ಶರಣಾಗತರಾಗುವುದರಿಂದ, ದಿವ್ಯ ಶಕ್ತಿಯ ಅನಂತವಾದ ಆಕರಕ್ಕೆ ನಾವು ಪ್ರವೇಶ ಪಡೆಯುತ್ತೇವೆ. ಶ್ರೀರಾಮಕೃಷ್ಣರು ಮತ್ತು ಶ್ರೀಮಾತೆಯವರು ಈ ಭರವಸೆಯನ್ನು ಕೊಟ್ಟಿದ್ದಾರೆ. ವಾಸ್ತವವಾಗಿ ಸ್ವತಃ ಶ್ರೀರಾಮಕೃಷ್ಣರು ಮತ್ತು ಶ್ರೀಶಾರದಾದೇವಿಯವರು ಆಧುನಿಕ ಯುಗದಲ್ಲಿ ಆ ಶಕ್ತಿಯಾಗಿದ್ದಾರೆ. ಅವರಲ್ಲಿ ಆಶ್ರಯ ಪಡೆಯುವವರು ಧನ್ಯರು.

*

## ಕೇಳಿ ತಿಳಿಯಿರಿ

[ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಗಳನ್ನು ಪೂಜ್ಯ ಸ್ವಾಮಿ ಪ್ರೇಮೇಶಾನಂದರ (೧೮೮೪-೧೯೬೧) ಆಂಗ್ಲ ಭಾಷೆಯ *GO FORWARD* ಗ್ರಂಥವನ್ನು ಆಧರಿಸಿ ಕನ್ನಡದಲ್ಲಿ ನಮ್ಮ ಓದುಗರಿಗೆ ನೀಡುತ್ತಿದ್ದೇವೆ. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ನಮ್ಮ ವಿಳಾಸಕ್ಕೆ ಕಳುಹಿಸಬಹುದು.]

### ೧. ನಮ್ಮ ದೇಶದ ಪ್ರಗತಿಯಲ್ಲಿ ನನ್ನ ಪಾತ್ರವೇನು?

ನಮ್ಮ ದೇಶದ ಜನರಿಗೆ ಮಹತ್ತಿನ ಅರಿವೇ ಇಲ್ಲ. ನೂರರಲ್ಲಿ ಒಬ್ಬ ಯುವಕನಿಗಾದರೂ ಒಂದು ಧ್ಯೇಯವಿರುವುದು ಸಂದೇಹವೇ. ಪ್ರಾಣಿಗಳಂತೆ ಯಾಂತ್ರಿಕವಾಗಿ ಎಲ್ಲರೂ ಜೀವಿಸುತ್ತಿದ್ದಾರೆ. ತಮ್ಮನ್ನು ಉತ್ತಮಗೊಳಿಸಿಕೊಳ್ಳಬೇಕು ಎಂಬ ಹಂಬಲವೇ ಇಲ್ಲ. ಅದಕ್ಕೇ ನಾನು ಹೇಳುವುದು ಜಾಗೃತರಾಗಿ, ನಿಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಿ ಎಂದು. ಯಾವುದೇ ಕೆಲಸ, ಹುದ್ದೆಯಲ್ಲಿದ್ದರೂ, ನಿಮ್ಮ ವಿಶೇಷತೆಯನ್ನು ಪ್ರಕಟಪಡಿಸಲು ಮರೆಯಬೇಡಿ. ಆಗ ಮಾತ್ರ ನಿಮ್ಮ ಜೀವನ ಸಾರ್ಥಕ. ಮುನ್ನಡೆ, ಮುನ್ನಡೆ—ಇದು ನಮ್ಮಗಳ ಮಂತ್ರವಾಗಬೇಕು. ಯಾರು ಹೇಗೆ ಉತ್ತಮರಾಗಬೇಕು ಎಂಬುದನ್ನು ತಿಳಿಯುವುದು ಕಷ್ಟ. ಎಲ್ಲರೂ ತಮ್ಮ ತಮ್ಮ ಸಾಮರ್ಥ್ಯವನ್ನು ಉಪಯೋಗಿಸಿ ಮುನ್ನಡೆಯಬೇಕು. ಶ್ರೀರಾಮಕೃಷ್ಣರು 'ಮುಂದೆ ಹೋಗು' ಎನ್ನುವ ಒಂದು ಕತೆಯನ್ನು ಹೇಳುತ್ತಿದ್ದರು. ಸ್ವಾಮಿ ವಿವೇಕಾನಂದರೂ ಹೇಳುತ್ತಿದ್ದರು, "ಸುಪ್ತ ಚೇತನವನ್ನು ಜಾಗೃತಗೊಳಿಸಿದಾಗ ಕೀರ್ತಿ ಬರುವುದು, ಮಹತ್ತು ದೊರೆಯುವುದು, ಪವಿತ್ರತೆ ಬರುವುದು, ಶ್ರೇಷ್ಠವಾಗಿರುವುದೆಲ್ಲವೂ ಬರುವುವು."

ಈ ದೇಶವು ತಮಸ್ಸಿನಿಂದ ತುಂಬಿಹೋಗಿದೆ. ಯಾರಲ್ಲೂ ಉತ್ಸಾಹವೇ ಕಂಡುಬರುವುದಿಲ್ಲ. "ನಮ್ಮ ಊಟ ನಿದ್ರೆಗಳಿಗೆ ವ್ಯವಸ್ಥೆಯಾದರೆ ಅಷ್ಟೇ ಸಾಕು"—ಇದು ನಮ್ಮ ಜನರ ಭಾವನೆ. ಇಲ್ಲಿ ಉಗಿಯಿರಿ ಎಂದು ಯಾರಾದರೂ ಹೇಳಿದರೆ ಅವನಿಗೆ ಅದರಿಂದ ಎಲ್ಲಿ ಸಹಾಯವಾಗಿಬಿಡುವುದೋ ಎಂದು ಹಿಂಜರಿಯುತ್ತೇವೆ! ಯಾವುದಾದರೂ ಕೆಲಸವನ್ನು ಮಾಡೆಂದು ಹೇಳಿದರೆ ಅದನ್ನು ಮೋಸದಿಂದ ಹೇಗೆ ಸಾಧಿಸಬಹುದು ಎಂದೇ ಯೋಚಿಸುತ್ತೇವೆ. ಇಂತಹ ಪರಿಸರದಲ್ಲಿ ಒಳ್ಳೆಯ ಕೆಲಸ ಹೇಗೆ ತಾನೆ ಸಾಧ್ಯ? ಈ ಪರಿಸ್ಥಿತಿಯನ್ನು ಇಂದಿನ ಯುವಜನತೆ ಬದಲಾಯಿಸದಿದ್ದರೆ ನಮ್ಮ ದೇಶ ಮುಳುಗುವುದು ನಿಶ್ಚಿತ. ನಿಮ್ಮ ಹೃದಯವನ್ನು ಸಂಪೂರ್ಣವಾಗಿ ಪರೀಕ್ಷಿಸಿಕೊಂಡು ಈ ಪಿಡುಗುಗಳನ್ನು ತೆಗೆದುಹಾಕಿ.

*